ಬಾಗಲಕೋಟೆ ಜಿಲ್ಲೆ:

1.	ಜಮಖಂಡಿ ತಾಲ್ಲೂಕು	14,475 ಎಕರೆ (5,860 ಹೆಕ್ಟೇರ್)
	ಒಟ್ಟು	**76,200 ಎಕರೆ** **(30,850 ಹೆಕ್ಟೇರ್)**

ಇ) ಸ್ಕೀ-'ಎ' ಅಡಿಯಲ್ಲಿ ಈ ಯೋಜನೆಗೆ ಒಟ್ಟು 8.45 ಟಿ.ಎಂ.ಸಿ. ನೀರು ನಿಗದಿಯಾಗಿರುತ್ತದೆ.

ಈ) ಉ) ಮುಳವಾಡ ಏತ ನೀರಾವರಿ ಯೋಜನೆಯ ಮೊದಲನೆಯ ಜಾಕ್‌ವೆಲ್ ಹಾಗೂ ಲೀಡ್ ಆಫ್ ಕೆನಾಲ್ ಕಾಮಗಾರಿ ಪೂರ್ಣಗೊಂಡಿದೆ. ಎರಡನೇ ಜಾಕ್‌ವೆಲ್ ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ. ಯೋಜನೆಯಡಿಯ ಪೂರ್ವ ಹಾಗೂ ಪಶ್ಚಿಮ ಕಾಲುವೆಗಳ ಕಾಮಗಾರಿಗಳು ಪ್ರಗತಿಯು ವಿವಿಧ ಹಂತದಲ್ಲಿವೆ. ಒಟ್ಟಾರೆ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಮಾರ್ಚ್-2006ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

2255 (2787) ಶ್ರೀ ಅಪ್ಪಸಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ):- ಮಾನ್ಯ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಮತಕ್ಷೇತ್ರದಲ್ಲಿ ಬರುವ ಪ್ರಾಚ್ಯವಸ್ತು ಸ್ಮಾರಕಗಳ ಮತ್ತು ಸರ್ಕಾರಿ ಜಾಗವನ್ನು ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅತಿಕ್ರಮಣಕಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಪ್ರಾಚ್ಯವಸ್ತು ಸ್ಮಾರಕಗಳ ಸಂರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ಮತ್ತು ಸರ್ಕಾರಿ ಜಾಗಗಳನ್ನು ಅತಿಕ್ರಮಿಸಿರುವುದನ್ನು ತೆರವುಗೊಳಿಸಿ ಅಭಿವೃದ್ಧಿಪಡಿಸಲು ಸರ್ಕಾರವು ಯಾವ ಯಾವ ಯೋಜನೆಗಳನ್ನು ಹಾಕಿಕೊಂಡಿದೆ?

ಶ್ರೀ ಧರ್ಮಸಿಂಗ್ (ಸನ್ಮಾನ್ಯ ಮುಖ್ಯಮಂತ್ರಿಗಳು)

ಅ) ಬಂದಿದೆ.

ಆ) ಅತಿಕ್ರಮಣಕಾರರ ವಿರುದ್ಧ ಕ್ರಮಕೈಗೊಳ್ಳಲಾಗಿದೆ.

ಇ) ಈ ಸ್ಮಾರಕಗಳು ರಾಷ್ಟ್ರೀಯ ಸಂರಕ್ಷಿತ ಸ್ಮಾರಕಗಳಾಗಿದ್ದು ಭಾರತೀಯ ಪುರಾತತ್ವ ಸರ್ವೇಕ್ಷಣೆ, ಧಾರವಾಡ ವಲಯ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳ ಅವಶೇಷಗಳು ಅಧಿನಿಯಮ 1958 ಮತ್ತು ನಿಯಮಗಳು 1959ರ ಸೆಕ್ಷನ್ 38ರ ಅಡಿ ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತಾರೆ. ರಾಜ್ಯ ಸರ್ಕಾರದ ಸಹಕಾರದೊಂದಿಗೆ ಒತ್ತುವರಿಗಳನ್ನು ತೆರವುಗೊಳಿಸಲು ಸಹ ಕ್ರಮಕೈಗೊಂಡಿರುತ್ತಾರೆ. ಈ ನಿಟ್ಟಿನಲ್ಲಿ ಸುಮಾರು 15 ಅನಧಿಕೃತ

ಕಟ್ಟಡಗಳನ್ನು ಕೆಡವಿ ಹಾಕಲಾಗಿರುತ್ತದೆ. ಇದಲ್ಲದೆ ವಿವಿಧ ನ್ಯಾಯಾಲಯಗಳಲ್ಲಿ 30 ದಾವೆಗಳನ್ನು ದಾಖಲು ಮಾಡಲಾಗಿದೆ.

2256 (3217) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ವಿದ್ಯಾರಣ್ಯಪುರದಿಂದ ವಿವಿಧ ಸ್ಥಳಗಳಿಗೆ ಬೆಳಿಗ್ಗೆ 7 ರಿಂದ 10 ಗಂಟೆ ಹಾಗೂ ಸಂಜೆ ವಿವಿಧ ಸ್ಥಳಗಳಿಂದ ವಿದ್ಯಾರಣ್ಯಪುರಕ್ಕೆ ಹೋಗುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಪ್ರತಿ ಬಸ್ಸಿನ ಆದಾಯವೆಷ್ಟು; (ವಿವರ ನೀಡುವುದು);

ಆ) ಬೆಳಗಿನ ಸಮಯಕ್ಕೆ ಹೋಲಿಸಿದಲ್ಲಿ, ಸಾಯಂಕಾಲ ಸಮಯದಲ್ಲಿ ಆದಾಯ ಕಡಿಮೆ ಇದೆಯೇ;

ಇ) ಪ್ರಯಾಣಿಕರಿಂದ ಬೇಡಿಕೆ ಬಂದಲ್ಲಿ ತಕ್ಷಣ ಬೇಡಿಕೆಗೆ ತಕ್ಕಂತೆ ಹೊಸ ಬಸ್ ಸಂಚಾರ ಆರಂಭಿಸಲಾಗುವುದು ಎಂದು ಸಂಸ್ಥೆ ಪ್ರಕಟಿಸಿದ್ದರೂ ಸಹ ಬಿ.ಇ.ಎಲ್. ವೃತ್ತದಿಂದ ವಿದ್ಯಾರಣ್ಯಪುರಕ್ಕೆ ಸಂಜೆ 6 ರಿಂದ ರಾತ್ರಿ 10 ಗಂಟೆಯವರೆಗೆ ಒಂದು ಮಿನಿ ಬಸ್ ಸಂಚಾರ ಆರಂಭಿಸಲು ಶಾಸಕರು ಪತ್ರ ಬರೆದಿದ್ದರೂ ಬಸ್ ಸಂಚಾರ ಆರಂಭಿಸದಿರಲು ಕಾರಣವೇನು;

ಈ) ಪ್ರತಿದಿನ ಸಂಜೆ ಹಾಗೂ ರಾತ್ರಿ ಸಮಯದಲ್ಲಿ ಬಿ.ಇ.ಎಲ್. ವೃತ್ತದಿಂದ ವಿದ್ಯಾರಣ್ಯಪುರಕ್ಕೆ ಅನೇಕ ಖಾಸಗಿ ವ್ಯಾನ್ ಹಾಗೂ ಬಸ್‌ನವರು ಟ್ರಿಪ್ ಮಾಡುತ್ತಿರುವುದರಿಂದ ಸಂಸ್ಥೆಗೆ ನಷ್ಟವಾಗುತ್ತಿಲ್ಲವೇ;

ಉ) ಇದನ್ನು ತಪ್ಪಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.

ಇ) ಸಂಜೆ 6 ಗಂಟೆಯ ನಂತರ 36 ಬಸ್ಸುಗಳಲ್ಲಿ 73 ಸುತ್ತುವಳಿಗಳ ಸೌಲಭ್ಯ ಒದಗಿಸಲಾಗಿರುವುದರಿಂದ, ಬಿ.ಇ.ಎಲ್. ವೃತ್ತದಿಂದ ವಿದ್ಯಾರಣ್ಯಪುರಕ್ಕೆ ಪ್ರತ್ಯೇಕವಾಗಿ ಮಿನಿ ಬಸ್ಸಿನ ಅವಶ್ಯಕತೆ ಕಂಡು ಬರುವುದಿಲ್ಲ.

ಈ) ಹೌದು.

ಉ) ಈ ಸಂಬಂಧ, ಆಗಿಂದಾಗ್ಗೆ ಧಾಳಿ ನಡೆಸಿ ಅನಧಿಕೃತ ಆಚರಣೆ ತಪ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.